ವಿ.ಮ.ವಿ.ವ.ಸಂಘದ

# ವಿ.ಎಂ.ಕೆ.ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ

## "ಮತದಾನ ಜಾಗೃತಿ ಕಾರ್ಯಕ್ರಮ"

ವಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ ರಾಜ್ಯಶಾಸ್ತ್ರ ವಿಭಾಗ ಮತ್ತು ತಾಲೂಕ ಆಡಳಿತ ಹುನಗುಂದ ಇವರ ಸಂಯುಕ್ತ ಆಶ್ರಯದಲ್ಲಿ "ಮತದಾನ ಜಾಗೃತಿ" ಕಾರ್ಯಕ್ರಮವನ್ನು ದಿನಾಂಕ :26-09-2019ರಂದು ಮುಂಜಾನೆ 11.30 ಗಂಟೆಗೆ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜು ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷರಾದ ಪ್ರೊ.ಎಲ್.ಎನ್ ಕುಲಕರ್ಣಿಯವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿ ಸ್ಥಾನವನ್ನು ಅಲಂಕರಿಸಿದ ಹುನಗುಂದ ತಾಲೂಕಿನ ಗ್ರೇಡ್-2 ತಹಶಿಲ್ದಾರರಾದ ಶ್ರೀ ಜಿ.ಎಂ ಕುಲಕರ್ಣಿಯವರು "18ವರ್ಷ ತುಂಬಿದ ವಿದ್ಯಾರ್ಥಿ, ಯವಕರೆಲ್ಲರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ತಾಲೂಕ ಆಡಳಿತ ನಿಮಗೆ ಮಾರ್ಗದರ್ಶನ ಮಾಡುತ್ತದೆ." ಎಂದು ಹೇಳಿದರು. ಇನ್ನೋರ್ವ ಅತಿಥಿಯಾದ ಪ್ರೊ. ಸಿದ್ದಲಿಂಗಪ್ಪ ಬೀಳಗಿಯವರು ಮಾತನಾಡಿ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಿಕೊಳ್ಳಲು ಯಾರೂ ಕಷ್ಟಪಡಬೇಕಾಗಿಲ್ಲ ನಿಮ್ಮ ಕೈಯಲ್ಲಿರುವ ಮೊಬೈಲ್ ಬಳಸಿ ಹೆಸರನ್ನು ನೊಂದಾಯಿಸಿಕೊಳ್ಳಬಹುದು ಎಂದು ತಿಳಿಸಿದರು. ಮತ್ತೋರ್ವ ಅತಿಥಿ ಶ್ರೀ ಶರಣಪ್ಪ ಹೂಲಗೇರಿ ಮಾತನಾಡಿ ಚುನಾವಣಾ ಆಯೋಗದ ಉದ್ದೇಶವನ್ನು ಸ್ಪಷ್ಟಪಡಿಸಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಪ್ರೊ. ಶ್ರೀನಿಧಿಯವರು ಸ್ವಾಗತ ಕೋರಿದರು. ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಪರಶುರಾಮ ಸಿ. ಇವರು ಕಾರ್ಯಕ್ರಮದ ಉದ್ದೇಶ ಮತ್ತು ಪ್ರಜಾಪ್ರಭುತ್ವದಲ್ಲಿ ಮತದಾನ ಅತ್ಯಂತ ಮೌಲ್ಯಯುತವಾದದ್ದು ಎಂದು ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರೊ. ಬಿ.ಎಚ್.ಗೋಡಿಯವರು ವಂದನಾರ್ಪಣೆ ಮಾಡಿದರೆ ಪ್ರೊ.ವಿ.ಪಿ.ರಾಯರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಕಾಲೇಜಿನ ಎಲ್ಲ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

PRINCIPAL
Vijaya Mahantesh Krupaposhit
S.R.Vastrad Arts, Science And Vijay
Shankarappa Bellihal Commerce College
Hungund-587118 (Dist:Bagalkot-Karnataka)